ಪ್ರಜಾವಾಣಿ



ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದ ಜೆಎಎಸ್‌ಎ ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ . ಎಡದಿಂದ (ನಿಂತವರು), ರೋಶಿನಿ, ಕೀರ್ತನಾ, ಸಂಧ್ಯಾ, ಬಾಬು ವಿವೇಕ್ (ಜೆಎಎಸ್‌ಎ ಮುಖ್ಯಸ್ಥರು), ಮಧು, ಐಶ್ವರ್ಯ, ಸಿಮೋನೆನ್, ಪುನೀತ್ ಸುರೇಶ್ (ತರಬೇತುದಾರ). (ಮಂಡಿಯೂರಿ ಕುಳಿತವರು), ಸರಾಯು, ಕೋನಿಕಾ, ಶೀತಲ್, ಪಿಂಕಿ, ಅಮೃತಾ, ರಂಜಿತಾ

## ಬ್ಯಾಸ್ಕೆಟ್‌ಬಾಲ್: ಜೈನ್ ಕಾಲೇಜು ಚಾಂಪಿಯನ್

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ಮಹಿಳಾ ತಂಡ ಆಗಸ್ಟ್ 8 ರಿಂದ 10ರವರೆಗೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದ ಜೆಎಎಸ್‌ಎ ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ.

ಭಾನುವಾರ ನಡೆದ ಫೈನಲ್ ಹೋರಾಟದಲ್ಲಿ ಜೈನ್ ವಿಶ್ವವಿದ್ಯಾಲಯ 68–57ರಲ್ಲಿ ಚೆನ್ನೈನ ಎಂ.ಒ.ಪಿ. ವೈಷ್ಣವ್ ಕಾಲೇಜು ತಂಡದ ಎದುರು ಗೆದ್ದು ₹25 ಸಾವಿರ ನಗದು ಬಹುಮಾನವನ್ನು ತನ್ನದಾಗಿಸಿಕೊಂಡಿತು.

ಜೈನ್ ತಂಡದ ಪರ ರೋಶಿನಿ 24 ಪಾಯಿಂಟ್ಸ್ ಹಾಗೂ ಸಿಮೋನೆನ್ 21 ಪಾಯಿಂಟ್ಸ್ ಕಲೆ ಹಾಕಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಜೈನ್ ವಿವಿ ತಂಡದ ರೋಶಿನಿ ಟೂರ್ನಿಯ ಅತ್ಯುತ್ತಮ ಆಟಗಾರ್ತಿ ಹಾಗೂ ಸಂಧ್ಯಾ ಶ್ರೇಷ್ಠ ಆಟಗಾರ್ತಿ ಪ್ರಶಸ್ತಿ ಪಡೆದರು.